VIDYAVARDHAKA LAW COLLEGE
LIBRARY
MYSURU



## II Semester 3 Year LL.B. Examination, December 2019
## CONTRACT – II
## (2018 and 2019 Batch)

Duration : 3 Hours Max. Marks : 80

**Instructions :** 1. Answer all **five** Units.

2. **One** essay type question and short note/problem is **compulsory** from **each** Unit.

3. Figures to the right indicate marks.

4. Answer should be written either in **English** or **Kannada completely.**

**ಸೂಚನೆಗಳು :** 1. ಎಲ್ಲಾ ಐದು ಘಟಕಗಳನ್ನು ಉತ್ತರಿಸಿರಿ.

2. ಪ್ರತಿಯೊಂದು ಘಟಕದಿಂದ ಒಂದು ಪ್ರಬಂಧ ರೀತಿಯ ಪ್ರಶ್ನೆ ಮತ್ತು ಲಘು ಟಿಪ್ಪಣಿ/ಸಮಸ್ಯೆ ಕಡ್ಡಾಯ.

3. ಬಲಗಡೆಯ ಅಂಕಿಗಳು ಅಂಕಗಳನ್ನು ಸೂಚಿಸುತ್ತವೆ.

4. ಸಂಪೂರ್ಣವಾಗಿ ಇಂಗ್ಲಿಷ್ ಅಥವಾ ಕನ್ನಡದಲ್ಲಿ ಉತ್ತರವನ್ನು ಬರೆಯಬೇಕು.

### UNIT – I

Q. No. 1. (a) Define contract of indemnity. State the distinctions between contract of indemnity and contract of guarantee. Marks : 10

ನಷ್ಟಭರ್ತಿ ಕರಾರನ್ನು ವ್ಯಾಖ್ಯಾನಿಸಿರಿ. ನಷ್ಟಭರ್ತಿ ಕರಾರು ಮತ್ತು ಜಾಮೀನುದಾರಿಕೆ ಕರಾರುಗಳ ನಡುವಿನ ವ್ಯತ್ಯಾಸಗಳನ್ನು ಹೇಳಿರಿ.

OR/ಅಥವಾ

(a) What is contract of guarantee ? Explain the various modes of discharge of surety from his liability. Marks : 10

ಜಾಮೀನುದಾರಿಕೆ ಕರಾರು ಎಂದರೇನು ? ಜಾಮೀನುದಾರನನ್ನು ಅವನ ಹೊಣೆಗಾರಿಕೆಯಿಂದ ವಿಮುಕ್ತಿಗೊಳಿಸುವ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 1. (b) Write a short note on 'Rights of the Surety.' Marks : 6

ಜಾಮೀನುದಾರನ ಹಕ್ಕುಗಳ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' guarantees payment to 'B' of the price of five sacks of flour to be delivered by 'B' to 'C' and to be paid for in a month. 'B' delivers five sacks to 'C'. 'C' pays for them. Afterwards 'B' delivers four sacks to 'C', which 'C' does not pay for. Is 'A' liable for the same ? Decide. Marks : 6

ಒಂದು ತಿಂಗಳಿನಲ್ಲಿ 'ಕ' ನು 'ಬ' ನಿಂದ ಖರೀದಿಸುವ ಐದು ಚೀಲ ಹಿಟ್ಟಿನ ಬೆಲೆಯನ್ನು ಪಾವತಿ ಮಾಡುವ ಬಗ್ಗೆ 'ಅ' ನು ಒಬ್ಬ ಜಾಮೀನುದಾರನಾಗಿ 'ಬ' ನಿಗೆ ವಚನವನ್ನು ಕೊಡುತ್ತಾನೆ. 'ಬ' ನು ಐದು ಚೀಲ ಹಿಟ್ಟನ್ನು 'ಕ' ನಿಗೆ ಪೂರೈಸುತ್ತಾನೆ ಹಾಗೂ 'ಕ' ನು ಅದರ ಬೆಲೆಯನ್ನು 'ಬ' ನಿಗೆ ಪಾವತಿಸುತ್ತಾನೆ. ಅನಂತರ 'ಬ' ನು ಮತ್ತೆ ನಾಲ್ಕು ಚೀಲ ಹಿಟ್ಟನ್ನು 'ಕ' ನಿಗೆ ಪೂರೈಸುತ್ತಾನೆ. ಆದರೆ ಇದಕ್ಕೆ 'ಕ' ನು ಹಣ ಪಾವತಿ ಮಾಡುವುದಿಲ್ಲ. ಇದಕ್ಕೆ 'ಅ' ನು ಹೊಣೆಗಾರನೇ ? ನಿರ್ಣಯಿಸಿರಿ.

## UNIT – II

Q. No. 2. (a) What is Bailment ? Explain its important features with decided cases. Marks : 10

ನಿಕ್ಷೇಪಣೆ ಎಂದರೇನು ? ಅದರ ಪ್ರಮುಖ ಲಕ್ಷಣಗಳನ್ನು ನಿರ್ಣಯಿಸಿದ ಪ್ರಕರಣಗಳೊಂದಿಗೆ ವಿವರಿಸಿರಿ.

OR/ಅಥವಾ

(a) Define pledge. Who can make a valid pledge ? Explain. Marks : 10

ಒತ್ತೆಯನ್ನು (ಗಿರವಿ) ವ್ಯಾಖ್ಯಾನಿಸಿರಿ. ಒಂದು ಕಾನೂನು ಮಾನ್ಯ ಒತ್ತೆಯನ್ನು ಯಾರು ಇಡಬಹುದು ? ವಿವರಿಸಿರಿ.

Q. No. 2. (b) Write a short note on 'Right of Lien.' Marks : 6

ಧಾರಣಾಧಿಕಾರ ಹಕ್ಕಿನ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' hires a carriage of 'B'. The carriage is unsafe, but 'B' is not aware of it. 'A' is injured while using that carriage. Is 'B' responsible to 'A' for the injury ? Decide. Marks : 6

'ಅ' ನು ಒಂದು ಗಾಡಿಯನ್ನು 'ಬ' ನಿಂದ ಬಾಡಿಗೆಗೆ ತೆಗೆದುಕೊಳ್ಳುತ್ತಾನೆ. ಆ ಗಾಡಿಯು ಸುರಕ್ಷಿತವಾಗಿರಲಿಲ್ಲ. ಆದರೆ ಈ ವಿಷಯವು 'ಬ' ನಿಗೆ ತಿಳಿದಿರಲಿಲ್ಲ. ಆ ಗಾಡಿಯನ್ನು ಉಪಯೋಗಿಸುವಾಗ 'ಅ' ನಿಗೆ ಗಾಯವಾಯಿತು. 'ಅ' ನಿಗೆ ಆದ ಗಾಯಕ್ಕೆ 'ಬ', ನು ಹೊಣೆಗಾರನಾಗುತ್ತಾನೆಯೇ ? ನಿರ್ಣಯಿಸಿರಿ.

## UNIT – III

Q. No. 3. (a) What is agency by ratification ? Explain its essentials. Marks : 10

ಅನುಸಮರ್ಥಿತ (ದೃಢೀಕರಣ) ಕಾರ್ಯಭಾರ ಎಂದರೇನು ? ಅದರ ಅವಶ್ಯಕ ಅಂಶಗಳನ್ನು ವಿವರಿಸಿರಿ.

OR/ಅಥವಾ

(a) Explain the duties of an agent. Marks : 10

ಒಬ್ಬ ಕಾರ್ಯಭಾರಿಯ ಕರ್ತವ್ಯಗಳನ್ನು ವಿವರಿಸಿರಿ.

Q. No. 3. (b) Write a short note on 'termination of agency.' Marks : 6

'ಕಾರ್ಯಭಾರದ ಅಂತ್ಯಗೊಳ್ಳುವಿಕೆ' ಯ ಕುರಿತು ಒಂದು ಲಘು ಟಿಪ್ಪಣಿಯನ್ನು ಬರೆಯಿರಿ.

OR/ಅಥವಾ

(b) 'A' an agent of 'B', sells the goods to 'C' without making proper enquiry as to the solvency of 'C'. At the time of sale, 'C' was an insolvent. Principal 'B' wants to sue the agent. Advise the principal. Marks : 6

'ಬ' ನ ಕಾರ್ಯಭಾರಿಯಾದ 'ಅ' ನು 'ಕ' ನಿಗೆ ಸರಕುಗಳನ್ನು 'ಕ' ನ ಆರ್ಥಿಕ ಸಾಮರ್ಥ್ಯದ ಬಗ್ಗೆ ಯೋಗ್ಯ ವಿಚಾರಣೆ ಮಾಡದೇ ಮಾರುತ್ತಾನೆ. ಸರಕುಗಳನ್ನು ಮಾರಾಟ ಮಾಡುವ ಸಮಯದಲ್ಲಿ 'ಕ' ನು ದಿವಾಳಿಯಾಗಿರುತ್ತಾನೆ. ಯಜಮಾನನಾದ 'ಬ' ನು ಕಾರ್ಯಭಾರಿಯ ಮೇಲೆ ದಾವೆ ಹೂಡಲು ಬಯಸುತ್ತಾನೆ. ಯಜಮಾನನಿಗೆ ಸಲಹೆಯನ್ನು ನೀಡಿರಿ.

## UNIT – IV

Q. No. 4. (a) What is partnership ? State the types of partners. Marks : 10

ಪಾಲುದಾರಿಕೆ ಎಂದರೇನು ? ಪಾಲುದಾರರಲ್ಲಿನ ಪ್ರಕಾರಗಳನ್ನು ತಿಳಿಸಿರಿ.

OR/ಅಥವಾ

(a) Explain the rights and duties of partners in brief. Marks : 10

ಪಾಲುದಾರರ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

Q. No. 4. (b) Write a short note on 'Effects of non-registration of partnership firm.' Marks : 6

ಪಾಲುದಾರಿಕಾ ಸಂಸ್ಥೆಯನ್ನು ನೋಂದಾಯಿಸದೇ ಇದ್ದರೆ ಆಗುವ ಪರಿಣಾಮಗಳ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

(b) Rama and Laxman agree to work together as carpenters. According to the agreement, Rama shall receive all profits and pay Laxman Rs. 10,000 per month as wages. Are Rama and Laxman partners ? Decide. Marks : 6

ರಾಮ ಮತ್ತು ಲಕ್ಷ್ಮಣ ಇವರು ಒಟ್ಟಿಗೆ ಬಡಿಗತನದ ಕೆಲಸವನ್ನು ಮಾಡಲು ಒಪ್ಪಿಕೊಳ್ಳುತ್ತಾರೆ. ಒಪ್ಪಂದದ ಪ್ರಕಾರ ರಾಮನು ಎಲ್ಲಾ ಲಾಭವನ್ನು ಪಡೆದುಕೊಂಡು ಲಕ್ಷ್ಮಣನಿಗೆ ಪ್ರತಿ ತಿಂಗಳು ರೂ. 10,000 ಸಂಬಳ ಕೊಡಬೇಕು. ರಾಮ ಮತ್ತು ಲಕ್ಷ್ಮಣ ಇವರು ಪಾಲುದಾರರಾಗುತ್ತಾರೆಯೇ ? ನಿರ್ಣಯಿಸಿರಿ.

## UNIT – V

Q. No. 5. (a) Explain the rights of an unpaid seller. Marks : 10

ಹಣ ಸಂದಾಯವಾಗದ ಮಾರಾಟಗಾರನ ಹಕ್ಕುಗಳನ್ನು ವಿವರಿಸಿರಿ.

OR/ಅಥವಾ

(a) "No one can transfer a better title than he himself has." Explain this statement. Marks : 10

'ಯಾವುದೇ ವ್ಯಕ್ತಿಯು ತನ್ನಲ್ಲಿರುವ ಮಾಲಿಕತ್ವಕ್ಕಿಂತ ಹೆಚ್ಚಿನದನ್ನು ಹಸ್ತಾಂತರ ಮಾಡಲಾರ.'' – ಈ ಹೇಳಿಕೆಯನ್ನು ವಿವರಿಸಿರಿ.

Q. No. 5. (b) Write a short note on "conditions and warranties." Marks : 6

ಷರತ್ತುಗಳು ಮತ್ತು ಭರವಸೆಗಳ ಕುರಿತು ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' agrees to supply 100 barrels of groundnut oil to 'B'. 'A' despatches 120 barrels. 'B' refuses to receive on the ground that 'A' has supplied excess oil. Advise 'A'. Marks : 6

'ಅ' ನು 100 ಬ್ಯಾರೆಲ್ ಕಡಲೆಕಾಯಿ ಎಣ್ಣೆಯನ್ನು 'ಬ' ನಿಗೆ ಪೂರೈಸಲು ಒಪ್ಪಿರುತ್ತಾನೆ. 'ಅ' ನು 120 ಬ್ಯಾರೆಲ್ ಎಣ್ಣೆಯನ್ನು ಪೂರೈಸುತ್ತಾನೆ. 'ಅ' ನು ಹೆಚ್ಚಿನ ಎಣ್ಣೆಯನ್ನು ಪೂರೈಸಿದ ಕಾರಣದಿಂದ 'ಬ' ನು ಆ ಎಣ್ಣೆಯನ್ನು ಸ್ವೀಕರಿಸಲು ನಿರಾಕರಿಸುತ್ತಾನೆ. 'ಅ' ನಿಗೆ ಸಲಹೆ ನೀಡಿರಿ.